ಈ) ಹಾಗಿದ್ದಲ್ಲಿ, ಈ ಕಟ್ಟಡಗಳ ನಿರ್ಮಾಣಕ್ಕೆ ಆಗಿರುವ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು)?

ಸಮಾಜ ಕಲ್ಯಾಣ ಇಲಾಖೆ

ಮುಳಬಾಗಿಲು ತಾಲ್ಲೂಕು, ತಿಮ್ಮರಾವುತನಹಳ್ಳಿಯಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು 2007–08ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲು ಮಂಜೂರು ಮಾಡಲಾಗಿದೆ. ಈ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ಕಾಮಗಾರಿಯನ್ನು ಇನ್ನೂ ಕೈಗೊಂಡಿರುವುದಿಲ್ಲ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಮುಳಬಾಗಿಲು ತಾಲ್ಲೂಕು ಬೈರಾಕೂರು ಗ್ರಾಮದಲ್ಲಿರುವ ಹಿಂದುಳಿದ ವರ್ಗಗಳ ಮಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣ ಕಾರ್ಯವನ್ನು ಆರ್.ಐ.ಡಿ.ಎಫ್ ಯೋಜನೆಯಡಿಯಲ್ಲಿ ರೂ.49.75 ಲಕ್ಷ ಅಂದಾಜು ವೆಚ್ಚದಲ್ಲಿ (ಪರಿಷ್ಕೃತ ಅಂದಾಜು ರೂ.67.15) ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದು, ಕಾಲಂ ಕಾಂಕ್ರಿಟ್ ನಿರ್ಮಾಣ ಪ್ರಗತಿಯಲ್ಲಿದೆ.

ಸಂಖ್ಯೆ: ಸಕಇ 31ಸ್ವೀಮರ 2009

(ಡಿ.ಸುಧಾಕರ)

ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

358 ಶ್ರೀ ಹ್ಯಾರಿಸ್ ಎನ್.ಎ.

ಮಾನ್ಯ ಮುಖ್ಯಮಂತ್ರಿಯವರು

ಅ) ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಆರೋಗ್ಯ ಕೇಂದ್ರಗಳು – 29

ಯು.ಎಫ್.ಡಬ್ಲ್ಯೂ.ಸಿ – 19

ಹೆರಿಗೆ ಆಸ್ಪತ್ರೆಗಳು – 24

ಔಷಧಾಲಯಗಳು – 17

ರೆಫರಲ್ ಆಸ್ಪತ್ರೆಗಳು – 6

ಆ) ಈ ಆಸ್ಪತ್ರೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತವಾಗಿಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಆಸ್ಪತ್ರೆಗಳನ್ನು ಸುಸಜ್ಜಿತವಾಗಿಡಲು ಆಸ್ಪತ್ರೆಗಳನ್ನು ನವೀಕರಣ ಮಾಡಲಾಗಿದೆ ಹಾಗೂ ಅವಶ್ಯಕತೆ ಇರುವ ಉಪಕರಣಗಳನ್ನು ನೀಡಲಾಗಿದೆ. ಮತ್ತು ಆರೋಗ್ಯ ಕಾಮಗಾರಿ ಕೋಶವನ್ನು ರಚಿಸಲಾಗಿದ್ದು, ಕಾಲಾನುಕಾಲಕ್ಕೆ ಆಸ್ಪತ್ರೆಗಳ ಕಟ್ಟಡವನ್ನು ನವೀಕರಿಸಲಾಗುತ್ತಿದೆ.

ಇ) ಹಾಗಿದ್ದಲ್ಲಿ, ಕಟ್ಟಡ ಮತ್ತು ಇತರ ಮೂಲಭೂತ ಸೌಲಭ್ಯಗಳ ಕೊರತೆಯಿರುವ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಿಗೆ ಸಕಾಲದಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದು?

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕಟ್ಟಡ ಹಾಗೂ ಇತರೇ ಸೌಲಭ್ಯಗಳ ಕೊರತೆಯಿರುವ ಆರೋಗ್ಯ ಕೇಂದ್ರಗಳು ಇರುವುದಿಲ್ಲ ಹಾಗೂ ಎಲ್ಲಾ ಆಸ್ಪತ್ರೆಗಳು ಸುಸ್ಥಿತಿಯಲ್ಲಿದೆ.

ನಅಇ 64 ಎಂಎನ್‌ಯು 2009

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ